ಹಲವು ರಾಜ್ಯಗಳನ್ನು ಗೆಲ್ಲುವುದರಲ್ಲಿ ಮುಂದಾಳತ್ವ ಅವರೇ ವಹಿಸಿದ್ದರು. ತಮಗೂ ಒಂದು ಸಣ್ಣ ರಾಜ್ಯಕೊಟ್ಟು ಸಾಮಂತರನ್ನಾಗಿ ಮಾಡಬೇಕೆಂಬ ಬಯಕೆಯನ್ನು ಹೇಳಿಕೊಂಡರು. ಅದಕ್ಕೇ ಅವರನ್ನು ರಾಜ್ಯಬಹಿಷ್ಕಾರ ಮಾಡಲಾಯಿತು. ಹೌದಾ? ಮಹಾರಾಜ, ನಮ್ಮ ರಾಜ್ಯದಲ್ಲಿ ಇದರ ಬಗ್ಗೆ, ಬೇರೆಯೇ ಮಾತಾನಾಡಿಕೊಳ್ಳುತ್ತಾರೆ ಎಂದು ಬ್ರಹ್ಮದತ್ತ ಹೇಳಿದ. ಏನದು? ಏನು ಮಾತಾನಾಡಿಕೊಳ್ಳುತ್ತಾರೆ?

ಸೇನಾಧಿಪತಿಯನ್ನು ಒಂದು ಸಣ್ಣ ರಾಜ್ಯಕ್ಕೆ ಸಾಮಂತನನ್ನಾಗಿ ಮಾಡಿದರೆ,ಉಳಿದವರೂ ದಂಗೆಯೇಳುತ್ತಾರೆ. ರಾಜ್ಯ ವಿಭಜನೆ ಆಗುತ್ತಾ ಹೋದಂತೆ, ನಮ್ಮ ಒಗ್ಗಟ್ಟಿನಲ್ಲಿ ಒಡಕು ಮೂಡುತ್ತಾ ಹೋಗುತ್ತದೆ. ಹಾಗಾಗಿ ನಿಮ್ಮ ತಂದೆಯವರನ್ನು ಮಂತ್ರಿಯನ್ನಾಗಿ ನೇಮಿಸಿಕೊಳ್ಳಲು ಮಹಾರಾಜರು ನಿರ್ಧರಿಸಿದ್ದರು. ಆ ವಿಷಯವನ್ನು ಹೇಳುವ ಮೊದಲೇ, ನಿಮ್ಮ ತಂದೆಯವರು ಒಳಪಿತೂರಿ ನಡೆಸಿ ಮಹಾರಾಜರನ್ನು ಕೊಲ್ಲಲು ಪ್ರಯತ್ನಿಸಿದಾಗ ಸಿಕ್ಕಿಬಿದ್ದರು. ಈ ತಪ್ಪಿಗೆ ಮರಣದಂಡನೆ ಶಿಕ್ಷೆಗೆ ಗುರಿಯಾದರೂ ನಿಮ್ಮ ತಂದೆ ಅಷ್ಟುದಿನ ಮಾಡಿದ ಸೇವೆಯನ್ನು ಪರಿಗಣಿಸಿ, ಮಹಾರಾಜರು ಕ್ಷಮಿಸಿ ರಾಜ್ಯಬಹಿಷ್ಕಾರ ಮಾಡಿದರು. ಅವರು ದಂಡಕಾರಣ್ಯದಲ್ಲಿ ರಾಜ್ಯಕಟ್ಟಿದರೂ ಸುಮ್ಮನಾದರು. ಈ ದಂಡಕಾರಣ್ಯ ಕುಂತಲ ರಾಜ್ಯದ ಆಧೀನದಲ್ಲಿಯೇ ಬರುತ್ತದೆ. ನಿಮ್ಮ ಪಾಲನೆಯಲ್ಲಿ ಒಮ್ಮೆಯಾದರೂ ಹೊರಗಿನವರ ದಾಳಿಯಾಗದಿರಲು ಕಾರಣ, ನಿಮ್ಮ ರಾಜ್ಯವನ್ನು ಸುತ್ತುವರೆದ ಕುಂತಲ ರಾಜ್ಯದ ಗಡಿ ಮಹಾರಾಜ. ಈ ದಂಡಕಾರಣ್ಯವು ಸಕಲ ಔಷದಿಗಳಿಗೆ ಮೂಲನೆಲೆಯಾಗಿದೆ. ಇದನ್ನು ರಕ್ಷಿಸುವ ಜವಾಬ್ದಾರಿಯನ್ನೂ ಅವರೇ ಮಾಡುತ್ತಿದ್ದಾರೆ. ಆದರೆ ಈ ಔಷಧಿಗಳು ಅವರ ರಾಜ್ಯದ ಪ್ರಜೆಗಳಿಗೆ ಸಿಗದೇ ರೋಗರುಜಿನಗಳಿಂದ ಪರದಾಡುತ್ತಿದ್ದಾರೆ. ಕೊನೆಗೆ ಮಹಾರಾಜರಿಗೆ ಈ ಸಮಸ್ಯೆ ಎದುರಾಗಿದೆ ಎಂದು ವಿವರಿಸಿದನು. ವನಮಾಲಿ ರಾಜನೂ ಯೋಚಿಸತೊಡಗಿದ. ತನ್ನ ಸಣ್ಣವಯಸ್ಸಿನಲ್ಲೇ ತಂದೆ ತೀರಿಕೊಂಡಿದ್ದು, ಈ ಮೋಸದ ಕಥೆ ಮೊದಲಬಾರಿ ಕೇಳಿದ್ದ. ತಾನು ಎಷ್ಟೇ ರಾಜ್ಯವಿಸ್ತಾರ ಮಾಡಿದರು ಚಂದ್ರಸೇನರು ಅಡ್ಡಿಪಡಸದೇ ಇದ್ದದ್ದು, ಒಮ್ಮೆ ತನ್ನ ಗೂಢಾಚಾರನನ್ನು ಗುಪ್ತಚರ ಮಾಹಿತಿಯನ್ನು ಕದಿಯಲು ಕಳುಹಿಸಿದಾಗ ಅವನು ಸಿಕ್ಕಿಬಿದ್ದರೂ ಕ್ಷಮಿಸಿ ಕಳುಹಿಸಿದ್ದಾರೆ.

ಇದೆಲ್ಲ ತನ್ನ ತಂದೆ ಮಾಡಿದ ಸಹಾಯವನ್ನು ನೆನಪಿನಲ್ಲಿ ಇಟ್ಟುಕೊಂಡು, ತನ್ನ ರಾಜ್ಯದ ಮೇಲೆ ದಾಳಿಮಾಡದೇ ರಕ್ಷಿಸುತ್ತಿರುವ ಚಂದ್ರಸೇನರ ಔದಾರ್ಯ ನೆನೆದು ಪಶ್ಚಾತ್ತಾಪವಾಯಿತು. ಬ್ರಹ್ಮಗುಪ್ತನ ಕಡೆಗೆ ನೋಡಿ, ನೀವಿನ್ನು ಹೊರಡಿ ವೈದ್ಯರನ್ನು ಕರೆದುಕೊಂಡು ನಾನೇ ಸ್ವತಃ ಅರಮನೆಗೆ ಬರುತ್ತೇನೆ. ಅದೇನು ಪ್ರಭು, ರಾಜವೈದ್ಯರನ್ನು ನಮ್ಮ ಜೊತೆ ಕಳುಹಿಸಿಕೊಡಿ ನಮಗೆ ಅರ್ಧರಾಜ್ಯ ಬೇಕು, ನನ್ನ ಅಳಿಯ ಮಹಾರಾಜ ಆಗಬೇಕು ಎಂದು ಬ್ರಹ್ಮದತ್ತ ಹೇಳಿದನು. ಆಗ ವನಮಾಲಿ ರಾಜನು, ನನಗೆ ನನ್ನ ತಪ್ಪಿನ ಅರಿವಾಗಿದೆ. ಇಷ್ಟುದಿನ ನನ್ನ ರಾಜ್ಯವನ್ನು ಕಾಪಾಡಿದ ಅವರ ಅರ್ಧರಾಜ್ಯವನ್ನು ಬೇರೆಯವರಿಗೆ ಹೋಗಲು ನಾನು ಬಿಡುವದಿಲ್ಲ. ನೀವು ಆ ಆಸೆಯನ್ನು ಬಿಟ್ಟುಬಿಡಿ ಎಂದರು. ನಾನು ಕುಂತಲ ರಾಜ್ಯಕ್ಕೆ ಬಂದಾಗ ನೀವು ನನ್ನನ್ನು ಕಾಣಿರಿ, ಅಲ್ಲಿಯೇ ನಿಮಗೆ ಏನಾದಾರೂ ಉದ್ಯೋಗ ಕೊಡಿಸುವೆ ಎಂದು ಆಶ್ವಾಸನೆ ನೀಡಿದರು. ವಿಕ್ರಮಸೇನನೂ ನಕ್ಕು, ಇರಲಿ ಬಿಡಿ ಮಾವ, ನನಗೆ ಅರ್ಧರಾಜ್ಯ ಬೇಡ ಉದ್ಯೋಗ ಸಾಕು ಎಂದು ಹೇಳಿದನು. ಬ್ರಹ್ಮದತ್ತನು, ವಿಕ್ರಮಸೇನನು ಮಹಾರಾಜರಿಗೆ ವಂದಿಸಿ ಹೊರಟುಹೋದರು.

ಮರುದಿನ ಬೆಳಗಾಗುತ್ತಲೇ, ವನಮಾಲಿ ರಾಜನು ಸಕುಟುಂಬ ಸಮೇತ ಚಂದ್ರಸೇನರ ಆಸ್ಥಾನಕ್ಕೆ ಬಂದನು, ರಾಜವೈದ್ಯರನ್ನೂ ಕರೆತಂದಿದ್ದನು. ಚಂದ್ರಸೇನ ಮಹಾರಾಜರಿಗೆ ಚಿಕಿತ್ಸೆ ನೀಡಲಾಯಿತು, ಅವರು ಗುಣಮುಖರಾದರು. ವನಮಾಲಿ ರಾಜನು ಚಂದ್ರಸೇನರಿಗೆ ಕ್ಷಮೆ ಕೇಳಿದನು. ತನ್ನ ಒಬ್ಬಳೇ ಮಗಳಾದ ರತ್ನಪ್ರಭೆಯನ್ನು ಚಂದ್ರಸೇನರ ಸೊಸೆಯನ್ನಾಗಿ ಮಾಡುವುದಾಗಿ ಹೇಳಿದನು. ವನಮಾಲಿ ರಾಜನಿಗೆ ಇಷ್ಟೆಲ್ಲಾ ಆಗಲು ಕಾರಣರಾದ ಆ ಇಬ್ಬರು ವೈದ್ಯರ ಬಗ್ಗೆ ನೆನಪಾಯಿತು, ಅವರ ಬಗ್ಗೆ ಚಂದ್ರಸೇನರಿಗೆ ಹೇಳಿದನು. ಆಗ ಚಂದ್ರಸೇನರು ಅವರು ಇವರೇನಾ ನೋಡಿ ಎಂದು, ಬ್ರಹ್ಮದತ್ತನನ್ನೂ, ವಿಕ್ರಮಸೇನನನ್ನೂ ತೋರಿಸಿ, ಅವರ ಪರಿಚಯ ಮಾಡಿಕೊಟ್ಟರು. ವಿಕ್ರಮಸೇನನಿಗೂ ರತ್ನಪ್ರಭೆಗೂ ವಿವಾಹವಾಯಿತು. ದಂಡಕಾರಣ್ಯದ ಔಷಧಿಗಳು ಎಲ್ಲರಿಗೂ ಲಭ್ಯವಾದವು. ನಡೆದ ವಿಷಯವನ್ನು ತಿಳಿಸಿ ತನಗೆ ಬುದ್ಧಿವಾದ ಹೇಳಿದ ಬ್ರಹ್ಮದತ್ತನಿಗೆ ವನಮಾಲಿ ರಾಜನು ಧನ್ಯವಾದಗಳನ್ನು ತಿಳಿಸಿದನು. ■

# ನಮ್ಮ ಪುಟಾಣಿ ತುಂಟ

■ ಚಂದ್ರಗೌಡ ಕುಲಕರ್ಣಿ

ಗರಿಗಳ ಚಾಚಿ ಹಾರುತ ಹೊರಟ
ನಮ್ಮ ಪುಟಾಣಿ ತುಂಟ !
ತೇಲುತ ವಾಲುತ ದಾಟಿ ಬಿಟ್ಟ
ಕೆರೆಹೊಳೆ ಹಳ್ಳ ಬೆಟ್ಟ !

ಕೈಯ ಬೀಸುತ ಕರೆಯುತಲಿದ್ದವು
ಗಿಡಮರಬಳ್ಳಿ ಹೂತು !
ಕೊಕ್ಕನು ಚುಚ್ಚಿ ಪರಿಮಳ ಉಂಡನು
ಕೊಂಬೆ ಕೊಂಬೆಗೆ ಕೂತು !

ಮಡುವಿನ ಪಕ್ಕದ ಜಾಲಿ ಮರದಲಿ
ಜೋಲುತಲಿದ್ದವು ಗೂಡು !
ಪುಟಾಣಿ ಗೀಜಗ ಕಟ್ಟಿಬಿಟ್ಟಿತ್ತು
ಗೂಡಿನ ಮೇಲೊಂದ್ ಮಾಡು !

ತಾಯಿ ಗಿಳಿಗೆ ಕಾಯುತಲಿದ್ದವು
ಪೊಟರೆ ಮರಿಗಳು ಇಣುಕಿ !
ತಂದೆ ತಾಯಿ ಗುಟ್ಟಿಯ ಹಾಕುತ
ಮಾಡುತಲಿದ್ದವು ಜ್ವಾಕಿ !

ನೀರು ಕುಡಿಯಲು ನದಿಗೆ ಬಂದಿತು
ಆಕಳು, ಜಿಂಕೆಯ ದಂಡು !
ತಾಪವ ಮರೆತು ದೂರಕೆ ನಿಂತವು
ಅಡಗಿದ ಮೊಸಳೆಯ ಕಂಡು !

ಹೂವಿಂದ ಹೂವಿಗೆ ಹಾರುತಲಿದ್ದವು
ರಂಗುರಂಗಿನ ಚಿಟ್ಟೆ !
ಮರಿಗಳಾಗಿ ಚಿಂವ್ಗುಡುತಿದ್ದವು
ಗೂಡಲಿ ಇದ್ದ ಮೊಟ್ಟೆ !

ಬೆಡಗಿನ ನವಿಲು ಕುಣಿಯುತಲಿದ್ದವು
ಸಾವಿರ ಕಣ್ಣನು ಕೆದರಿ !
ಮಾಮರದಲ್ಲಿ ಹಾಡಿತು ಕೋಗಿಲೆ
ಚೈತ್ರ ಬಂದುದ ಸಾರಿ !

ಮೋಡದ ಚಿತ್ರವ ಬಿಡಿಸುತಲಿದ್ದಿತು
ಸುಂದರ ನೀಲಿಯ ಬಾನು !
ತಿಳಿನೀರ್ ಮಡುವಲಿ ಈಜುತಲಿದ್ದವು
ಫಳ ಫಳ ಹೊಳೆಯುವ ಮೀನು !

ದುಂಬಿಯ ಬರುವನು ಕಾಯುತಲಿದ್ದವು
ಅರಳಿದ ಬಣ್ಣದ ಹೂವು !
ಇಲಿ ಬೆನ್ಹತ್ತಿ ಸರಸರ ಹರಿಯಿತು
ಗೋದಿ ಬಣ್ಣದ ಹಾವು !

ಆನೆಯ ಮರಿಗಳು ನಡೆಯುತಲಿದ್ದವು
ಹಿರಿಯರ ಕಾಲ್ಗಳಲಿ ಅವಿತು !
ಬೇಟೆಯಾಡಲು ಹೊರಟವು ನಾಯಿ
ಹಿಂಡು ಹಿಂಡಾಗಿ ಕಲೆತು !

ಕರೊನಾ ಹೊಡೆತಕೆ ಮನೆಪಂಜರದಿ
ಒದ್ದಾಡ್ತಿದ್ದ ಪುಟ್ಟ !
ರೆಕ್ಕೆಯ ಬಿಚ್ಚಿ ಹಾರುತ ಪ್ರಕೃತಿಯ
ಸೊಬಗಿಗೆ ಸಂತಸಪಟ್ಟ !

ಸಿಂಹದ ಸಿಡಿಲಿನ ಗರ್ಜನೆ ಕೇಳಿ
ಒಮ್ಮೆಲೆ ಪುಟ್ಟ ಚೀರಿ !
ಚಡ್ಡಿ ಹಾಸಿಗೆ ಬಿಸಿ ಮಾಡಿದ್ದ
ಕನಸನು ಕಂಡು ಹೆದರಿ ! ■